ಪಿ. ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 27-05-2022.

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಮ್.ಎಲ್.ಎನ್ ವಕೀಲರಿಂದ,**

1. ಈ ದಾವೆಯ ಮೂಲವಾದಿ ಗಣಪಯ್ಯ ದೇವಾಡಿಗ ನನಗೆ ತಂದೆಯಾಗಬೇಕು. ನನ್ನ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದು, ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಆಗದೇ ಇರುವ ಕಾರಣ ಅವರು ನನಗೆ ಅಧಿಕಾರ ಪತ್ರವನ್ನು ಕೊಟ್ಟಿದ್ದಾರೆ. ನನ್ನ ತಂದೆಯವರಿಗೆ ಕಿವಿ ಕೇಳಿಸುವುದಿಲ್ಲ, ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಮತ್ತು ನಡೆದಾಡಲು ಕೂಡ ಕಷ್ಟವಾಗುತ್ತದೆ ಆದ್ದರಿಂದ ಅವರು ನನಗೆ ಅಧಿಕಾರ ಪತ್ರ ಕೊಟ್ಟಿದ್ದಾರೆ. ನನ್ನ ತಂದೆಯ ಅನಾರೋಗ್ಯದ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ತನಗೆ ಸಾಕ್ಷಿ ನುಡಿಯಲು ಆಗದೇ ಇರುವುದರಿಂದ ನನ್ನ ತಂದೆಯೇ ವಕೀಲರಿಗೆ ಹೇಳಿ ಅಧಿಕಾರ ಪತ್ರವನ್ನು ನನ್ನ ಹೆಸರಿಗೆ ಬರೆಸಿಕೊಟ್ಟಿದ್ದಾರೆ.

2. ಅಧಿಕಾರ ಪತ್ರವನ್ನು ವಕೀಲರ ಮೂಲಕ ನ್ಯಾಯಾಲಯದಲ್ಲಿ ನನ್ನ ತಂದೆ ತಯಾರಿಸಿ ಕೊಟ್ಟಿದ್ದಾರೆ. ಅದನ್ನು ತಯಾರಿಸುವಾಗ ನನ್ನ ತಂದೆ ಕೂಡ ಹಾಜರಿದ್ದರು. ಅಧಿಕಾರ ಪತ್ರವನ್ನು ಟೈಪಿಂಗ್ ಸೆಂಟರಿನಲ್ಲಿ ಗಣಕೀಕರಣ ಮಾಡಿಸಿದ್ದರು. ಅದಕ್ಕೆ ನಾನು ಸಹಿಯನ್ನು ನ್ಯಾಯಾಲಯದ ಆವರಣದಲ್ಲಿ ಮಾಡಿದ್ದೇನೆ. ಅಧಿಕಾರ ಪತ್ರವನ್ನು ನನ್ನ ತಂದೆ ನನಗೆ ಬರೆದುಕೊಟ್ಟಿಲ್ಲ ನಾನೇ ಅದನ್ನು ಮೋಸದಿಂದ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಮತ್ತು ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆಗೆ ತಿಳಿದಿರುವ ದಾವಾ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಎಲ್ಲಾ ವಿಷಯಗಳನ್ನು ನನ್ನ ತಂದೆ ನನಗೆ ಹೇಳಿದ್ದಾರೆ ಎನ್ನುತ್ತಾರೆ. ನನ್ನ ಜನ್ಮ ದಿನಾಂಕ 30-06-1982 ಆಗಿರುತ್ತದೆ.

4. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲು ವಕೀಲರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. 1974 ರಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ಗಂಡ ಕೊಗ್ಗ ದೇವಾಡಿಗ ರವರ ಮಧ್ಯ ಆಸ್ತಿ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ನಿಪಿ-26 ರ ಪ್ರಕಾರ 1974 ರಲ್ಲಿಯೇ ನನ್ನ ತಂದೆ ಮತ್ತು ಅವರ ಅಣ್ಣ ಕೊಗ್ಗ ದೇವಾಡಿಗ ರವರ ಮಧ್ಯ ಆಸ್ತಿ ವಿಭಾಗವಾಗ ಆ ಬಗ್ಗೆ ಮ್ಯುಟೇಶನ್ ಕೂಡ ಮಂಜೂರಾಗಿದೆ ಮತ್ತು ಪಹಣಿ ಪತ್ರಿಕೆಗಳಲ್ಲಿ ಹೆಸರು ಬದಲಾವಣೆಯ ಆಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅವರ ಅಣ್ಣ ಕೊಗ್ಗ ದೇವಾಡಿಗ ನೀಡಿದ ವರದಿ ಪ್ರಕಾರವೇ ಅವರವರ ಪಾಲಿಗೆ ಬಂದ ಆಸ್ತಿಗಳಲ್ಲಿ ಹೆಸರು ಬದಲಾವಣೆಯಾಗಿದೆ ಎಂದರೆ ಸರಿಯಲ್ಲ.

ಪಿ. ಡಬ್ಲು 1

**5.**1974 ರಲ್ಲಿ ಆದ ವಿಭಾಗದ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಹೆಸರು ಬದಲಾವಣೆಯಾಗಿದ್ದು ಆದೇ ರೀತಿಯಲ್ಲಿಯೇ ಇವತ್ತಿನವರೆಗೂ ಪಹಣಿ ಪತ್ರಿಕೆಗಳಲ್ಲಿ ಹೆಸರುಗಳು ದಾಖಲಾಗುತ್ತಾ ಬಂದಿದೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರಿದು ಅದು 1 ನೇ ಪ್ರತಿವಾದಿಯ ಗಂಡ ಮೋಸದಿಂದ ಮಾಡಿಕೊಂಡಿದ್ದು ಅದೇ ರೀತಿ ದಾಖಲೆ ಮುಂದುವರಿದಿದೆ ಎಂದು ಹೇಳುತ್ತಾರೆ. ಪಹಣಿ ಪತ್ರಿಕೆಗಳಲ್ಲಿ ಮೋಸದಿಂದ ಹೆಸರುಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಂಡಿದ್ದಾರೆ ಎಂದು ನಾನು ಊಹಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**6.** 1974 ರಲ್ಲಿ ಆದ ವಿಭಾಗದ ಬಗ್ಗೆ ನನ್ನ ತಂದೆಯವರಿಗೆ ಮಾತ್ರ ವ್ಯಯಕ್ತಿಕ ಮಾಹಿತಿ ಇದ್ದ ಕಾರಣ ನಾನು ವಿಭಾಗ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 1974 ರ ವಿಭಾಗ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಯಾವುದೇ ವಿಭಾಗ ಆಗಿಲ್ಲ ಎಂದು ಹೇಳುತ್ತಾರೆ. ನಾನು 1982 ರಲ್ಲಿ ಜನಿಸಿದ ಕಾರಣ ದಿ.07-07-1974 ರಲ್ಲಿ ಆದ ವಿಭಾಗದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**7.** 1974 ರಲ್ಲಿ ಆದ ವಿಭಾಗ ಮತ್ತು ಅದರ ಆಧಾರದ ಮೇರೆಗೆ ಪಹಣಿ ಪತ್ರಿಕೆಗಳಲ್ಲಿ ಆದ ಹೆಸರು ಬದಲಾವಣೆಗಳನ್ನು ನಾವು ಈವರೆಗೂ ಎಲ್ಲಿಯೂ ಪ್ರಶ್ನಿಸಿರಲಿಲ್ಲ ಎಂದರೆ ಸಾಕ್ಷಿಯು ನಾವೆಲ್ಲರೂ ಚಿಕ್ಕವರಿದ್ದ ಕಾರಣ ಆ ಬಗ್ಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ. ನನ್ನ ತಂದೆಯವರು 1974 ರಲ್ಲಿ ಶಾನುಭೋಗರ ಕಚೇರಿಯಲ್ಲಿ ಉಗ್ರಾಣಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರಿದು ನನ್ನ ದೊಡ್ಡಪ್ಪ ಕೂಡ ಉಗ್ರಾಣಿ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ.

**8.** ನಾನು 1982 ರಲ್ಲಿ ಜನಿಸಿದ ನಂತರ ನನ್ನ ಕುಟುಂಬದಲ್ಲಿ ನನ್ನ ತಂದೆ ಗಣಪಯ್ಯ ದೇವಾಡಿಗ, ತಾಯಿ ಲಕ್ಷ್ಮೀ, ಅಣ್ಣ ಉದಯ, ತಮ್ಮ ಮಂಜುನಾಥ, ದೊಡ್ಡಮ್ಮ ಭಾಗೀರಥಿ ಮತ್ತು ನಾನು ವಾಸವಿದ್ದೆವು. ನಾನು ದೊಡ್ಡವಳಾದಾಗ 1 ನೇ ಪ್ರತಿವಾದಿ ನಮ್ಮ ಮನೆಯಲ್ಲಿ ಇರಲಿಲ್ಲ, ಅವರು ಮತ್ತು ನನ್ನ ದೊಡ್ಡಪ್ಪ ಕೊಗ್ಗ ದೆವಾಡಿಗ ಪ್ರತ್ಯೇಕ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನ್ನ ದೊಡ್ಡಪ್ಪ ಮೃತಪಟ್ಟ ನಂತರ ಸ್ವಲ್ಪದಿನ 1 ನೇ ಪ್ರತಿವಾದಿ ನಮ್ಮ ಜೊತ್ತೆ ಇದ್ದು ಆ ಬಳಿಕ ತಮ್ಮ ತವರು ಮನೆಗೆ ಹೋಗಿದ್ದರು ಎನ್ನುತ್ತಾರೆ.

ಮುಂದುವರಿದ ಪಾಟೀ ಸವಾಲಿಗಾಗಿ ಶ್ರೀ ಎಂ.ಎಲ್.ಎನ್. ವಕೀಲರು ಸಮಯ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.